**ಇಂದು ದಿನಾಂಕಃ 27-06-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಬಿ.ಕೆ ವಕೀಲರಿಂದಃ-**

ಮಸ್ತಾನ ಸಾಬರವರು ದಾವಾ ಜಮೀನನ್ನು ಖರೀದಿಸಿದ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ದಾವಾ ಜಮೀನುಗಳನ್ನು ಮಾಲಿಗೌಡರ ಸ್ಥಳ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೂ. 20/- ಛಾಪಾ ಕಾಗದದ ಮೇಲೆ ಖರೀದಿ ಮಾಡಿರುವುದನ್ನು ಬರೆದಿದ್ದನ್ನು ನಾನು ನೋಡಿದ್ದೇನೆ. ಸಾಮಾನ್ಯವಾಗಿ ಸಂಪೂರ್ಣ ಹಣ ನೀಡಿದ ನಂತರವೇ ಜಮೀನಿನ ಖರೀದಿಯಾಗುತ್ತದೆ ಎಂದರೆ ಸರಿ. ನಿಪಿ-3 ರ ಪ್ರಕಾರ ಉಳಿದ ರೂ. 6,500/- ಬರುವ ಯುಗಾದಿ ಹಬ್ಬಕ್ಕೆ ಕೋಡಬೇಕು ಎಂದು ಕರಾರು ಮಾಡಲಾಗಿದೆ ಎಂದು ಉಲ್ಲೇಖವಿದೆ ಎಂದರೆ ಸರಿ. ಪೂರ್ಣ ಹಣ ನೀಡಿರುವ ಬಗ್ಗೆ ಯಾವುದಾದರೂ ದಾಖಲೆ ನೋಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನೋಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-3 ರ ದಾಖಲೆಯಾದ 1 ವರ್ಷದ ನಂತರ ಸದರಿ ಪೂರ್ಣ ಹಣ ನೀಡಿರುವ ಬಗ್ಗೆ ದಾಖಲೆ ನೀಡಿದ್ದಾರೆ. ಈ ರೀತಿ ದಾಖಲೆಯನ್ನು ವಾದಿಗೆ ತೋರಿಸು ಎಂದು ಕೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಸದರಿ ದಾಖಲೆ ನನ್ನ ಹತ್ತಿರ ಇದೆ ಎಂದು ನುಡಿಯುತ್ತಾರೆ.

ನಿಪಿ-3 ರ ದಾಖಲೆಗೆ ಸಾಕ್ಷಿ ಇರುವ ಹಮೀದ ಪಟೇಲರವರು ವಾದಿಯ ತಂದೆ ಎಂದರೆ ಸರಿ. ಸದರಿ ದಾಖಲೆಯ ಸಾಕ್ಷಿ ಇರುವ ಹುಸೇನ ಬೀ ರವರು ವಾದಿಯ ಅತ್ತೆಗೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೂ ಹಾಗೂ ವಾದಿಗೂ ಯಾವುದೇ ರೀತಿಯಿಂದ ಸಂಬಂಧವಿರುದಿಲ್ಲ ಮತ್ತು ಇತಿಹಾಸದಲ್ಲಿ ದಾವಾ ಆಸ್ತಿಗಳ ಮಾಲೀಕ ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿಯಲ್ಲ.

ಖರೀದಿಯಾಗುವ ಪಂಚಾಯಿತಿ ಸಮಯಕ್ಕೆ ವಾದಿ, ವಾದಿಯ ತಂದೆ, ನಾನು ಮತ್ತು ಇನ್ನೊಬ್ಬ ಇದ್ದೇವು. ಆ ಸಮಯಕ್ಕೆ ಯಾರು ಯಾರಿಗೇ ದುಡ್ಡು ಕೊಟ್ಟರು ಎಂದು ಪ್ರಶ್ನಿಸಿದಾಗ ಸಾಕ್ಷಿ ಮಸ್ತಾನ ಸಾಬ ತಂದೆ ಮೋದಿನ ಸಾಬರವರಿಗೆ ಮಸ್ತಾನ ಸಾಬ ತಂದೆ ಹಮೀದ ಪಟೇಲರವರು ರೂ. 6,000/- ಮತ್ತು ಇನ್ನೊಂದು ಬಾರಿ ರೂ. 6,500/- ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಹಣವನ್ನು ನೀಡಲು ಒಂದು ವರ್ಷ ವ್ಯಾತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ಖರೀದಿ ಯಾಗುವ ಸಮಯಕ್ಕೆ ಯಾರು ಸಹಿ ಮಾಡಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಖಾಜಾಮೀಯಾ ತಂದೆ ಮಹೇಬೂಬ ಸಾಬ್ ಮತ್ತು ಮಸ್ತಾನ ಸಾಬ್ ತಂದೆ ಮೋದಿನ ಸಾಬರವರ ಹೆಂಡತಿ ಇದ್ದು ಇನ್ನೊಂದು ಬಾರಿ ನೀಡುವಾಗ ಬೇರೆ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ.

ನಾನು ಸಮಾಜ ಸೇವಕ ಎಂದರೆ ಸರಿ. ಸಾಮಾನ್ಯವಾಗಿ ರೂ. 100/- ಹೆಚ್ಚಿನ ಆಸ್ತಿಯನ್ನು ಖರೀದಿ ಮಾಡಬೇಕಾದರೆ ನೊಂದಣಿ ಮಾಡಬೇಕು ಎಂದು ಕಾನೂನು ಇದೆ ಎಂದು ನನಗೆ ಗೊತ್ತಿದೆ ಎಂದರೆ ಸರಿ. ನಾನು ಸದರಿ ದಾಖಲೆಯನ್ನು ನೊಂದಣಿ ಮಾಡಬೇಕು ಎಂದು ಖರೀದಿ ಕೋಡುವ ಸಮಯಕ್ಕೆ ಯಾರಿಗೂ ತಿಳಿಸಿಲ್ಲ. ಈ ದಾವೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2007 ರ ಮುಂಚೆ ದಾವಾ ಆಸ್ತಿ ಮಸ್ತಾನ ಸಾಬ ತಂದೆ ಮೊದಿನ ಸಾಬ್ ರವರಿಗೆ ಸೇರಿತ್ತು. ಸದರಿ ಜಮೀನು ಈಗಲೂ ಸಹ ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಮೊದಿನ ಸಾಬ್ ಎಂಬ ವ್ಯಕ್ತಿ ಇಲ್ಲದೇ ಇದ್ದರು ಸಹ ಮೋದಿನ ಸಾಬ್ ಎಂದು ಬರೆದು ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸತಾಯಿಸಲು ವಾದಿ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**